ಕರ್ನಾಟಕ ಸರ್ಕಾರ

ನಂ: ಎಎಲ್‌ಎನ್(ಪ-2)(ಪಿ) ಎಸ್‌ಆರ್ 31/2016-17

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ:25-03-2017

ಪರಿಷ್ಕೃತ ಅಧಿಕೃತ ಜ್ಞಾಪನ

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸ.ನಂ.18/1ಬಿ2 ರಲ್ಲಿ 1-37 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಸದರಿ ಜಮೀನಿನ ಪೈಕಿ 0-38.08 ಗುಂಟೆ ಜಮೀನು ವಾಸದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಅಪರ್ಣ ಚನ್ನಕೇಶವಲು ಬಿನ್ ವಿ.ಕೆ. ಚನ್ನಕೇಶವಲು, ನಂ.81/ಡಿ 17ನೇ ಇ ಮೈನ್ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ರವರು ಸಲ್ಲಿಸಿರುವ ಅರ್ಜಿಯ ದಿನಾಂಕ: 05-10-2016.

ಉಲ್ಲೇಖ:-
1. ಈ ಕಛೇರಿಯ ಅಧಿಕೃತ ಜ್ಞಾಪನ ಸಂ.ಎಎಲ್‌ಎನ್ (ಇವಿಹೆಚ್) ಎಸ್‌ಆರ್ 664/2007-08 ದಿನಾಂಕ: 03-10-2008.
2. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರ ಪತ್ರದ ಸಂ.ಎಎಲ್‌ಎನ್ (ಪ) ಸಿಆರ್ 491/2007-08 ದಿನಾಂಕ:28-11-2016
3. ಸಹಾಯಕ ನಿರ್ದೇಶಕರು (ಪೂರ್ವ) ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂ.ಬೆಂಅಪ್ರಾ/ನಯೋಸ/ಸಿಓಎಸ್-1030/1071/ 2016-17 ದಿನಾಂಕ:19-12-2016, ಉಪ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂ. ಬೆಂಅಪ್ರಾ/ಉಪ (ಭೂಸ್ವಾ) 669/2016-17 ದಿನಾಂಕ: 16-12-2016, ವಿಶೇಷ ಭೂಸ್ವಾಧೀನಾಧಿಕಾರಿಗಳು, ಮೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂ.ಎಸ್‌ಎಲ್‌ಎಒ/ಎಎಲ್‌ಎನ್ 722/16-17 ದಿನಾಂಕ:19-12-2016 ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು-2 ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ ಬೆಂಗಳೂರು ರವರ ಪತ್ರ ಸಂ.ಬೆಂಗಳೂರು/ವಿಭೂಸ್ವಾಅ-2/2836/16-17 ದಿನಾಂಕ: 06-12-2016
4. ಶ್ರೀಮತಿ ಅಪರ್ಣ ಚನ್ನಕೇಶವಲು ಬಿನ್ ವಿ.ಕೆ. ಚನ್ನಕೇಶವಲು, ನಂ.81/ಡಿ 17ನೇ ಇ ಮೈನ್ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ಅರ್ಜಿ ದಿನಾಂಕ:05-10-2016.

***

ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸ.ನಂ.18/1ಬಿ2 ರಲ್ಲಿ 1-37 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಸದರಿ ಜಮೀನಿನ ಪೈಕಿ 0-38.08 ಗುಂಟೆ ಜಮೀನು ವಾಸದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಬಗ್ಗೆ ಪರಿಷ್ಕೃತ ಆದೇಶ ನೀಡಲು ಕೋರಿ ಶ್ರೀಮತಿ ಅಪರ್ಣ ಚನ್ನಕೇಶವಲು ಬಿನ್ ವಿ.ಕೆ. ಚನ್ನಕೇಶವಲು, ನಂ.81/ಡಿ 17ನೇ ಇ ಮೈನ್ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ರವರು ದಿನಾಂಕ:05-10-2016ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಮನವಿ ಬಗ್ಗೆ ಪರಿಶೀಲಿಸಿ, ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರು ಉಲ್ಲೇಖ(2)ರಂತೆ ವರದಿ ಸಲ್ಲಿಸುತ್ತಾ, ದೊಡ್ಡಕನ್ನಲ್ಲಿ ಗ್ರಾಮದ ಸ.ನಂ.18/1ಬಿ2 ರಲ್ಲಿ 0-38.08 ಗುಂಟೆ ಜಮೀನು ಅರ್ಜಿದಾರರಿಗೆ ಹಿಂದಿನ ಖಾತೆದಾರರಿಂದ ಎಂಆರ್ 89/05-06 ರಂತೆ ಹಕ್ಕುಬಂದಿರುತ್ತದೆ. ಅರ್ಜಿದಾರರ ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ಜಮೀನಿಗೆ ರಸ್ತೆ ಸಂಪರ್ಕ ಇದ್ದು ಯಾವುದೇ ಅನಧಿಕೃತ ಕಟ್ಟಡ, ಬಿ.ಖರಾಬು ಇರುವುದಿಲ್ಲ ಅರ್ಜಿದಾರರ ಕೋರಿಕೆಯಂತೆ ವಾಸದ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ವರದಿಯೊಂದಿಗೆ ಶಿಫಾರಸ್ಸು ಮಾಡಿರುತ್ತಾರೆ.

ಉಲ್ಲೇಖ(3)ರ ಸಹಾಯಕ ನಿರ್ದೇಶಕರು (ಪೂರ್ವ) ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರ ಪತ್ರದಂತೆ ಪ್ರಸ್ತಾಪಿತ ಪ್ರದೇಶವು ಸಬ್ ಸೆಂಟ್ರಲ್ ಬಿಸಿನೆಸ್ ಏರಿಯಾಗಾಗಿ ವರ್ಗೀಕರಿಸಿದ್ದು ಹಾಲಿ ರಸ್ತೆಯನ್ನು ಸೂಚಿಸಿದೆ. ಮತ್ತು ಪಶ್ನಿತ ಜಮೀನಿನ ಪೂರ್ವಕ್ಕೆ ರೈಲ್ವೆ ಲೈನ್ ಅನ್ನು ಸೂಚಿಸಿದೆ ಸರ್ಕಾರದ ದಿ:25-06-2007 ರಂದು ಅನುಮೋದನೆಗೊಂಡಿರುವ ಆರ್‌ಎಂಪಿ 2015ರ ವಲಯ ನಿಯಮಾವಳಿಯ Chapter 4.4. Commercial (Business) 4.4.2) Regulations i) permissible Land use other ನಲ್ಲಿ land uses permissible (as main land use): R,I-3, T3 & U4 ಎಂದು ಉಲ್ಲೇಖಿಸಲಾಗಿದೆ. ಪ್ರಸ್ತಾಪಿತ ಪ್ರದೇಶವು ಕೆರೆಗೆ ಅಥವಾ ನಾಲಾಗೆ ಲಗತ್ತಾಗಿದ್ದಲ್ಲಿ ಅಥವಾ ಪ್ರಶ್ನಿತ ಜಮೀನಿನಲ್ಲಿ ಕೆರೆ/ನಾಲಾ ಹಾದು ಹೋಗಿದ್ದಲ್ಲಿ ಸದರಿ ಕೆರೆ/ ನಾಲಾದ ಅಂಚಿನಿಂದ ಅಳವಡಿಸಬೇಕಾದ Buffer (No Development zone)ಗೆ ಕುರಿತಂತೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ತೀರ್ಪಿನಂತೆ ಹಾಗೂ ಸರ್ಕಾರದ ದಿ: 17-5-16 ರ ಪತ್ರದಂತೆ ಕೆರೆ ನಾಲಾಗೆ ಅಗತ್ಯವಿರುವ ಬಫರ್ ಜಾಗವನ್ನು ಹೊರತುಪಡಿಸಿ, ಪ್ರಶ್ನಿತ ಜಮೀನಿನಲ್ಲಿ ಖರಾಬು ಜಾಗ ಇದ್ದಲ್ಲಿ ಸದರಿ ಜಾಗವನ್ನು ಹೊರತುಪಡಿಸಿ ಹಾಲಿ ರಸ್ತೆಯನ್ನು ಯಥಾರೀತಿ ಕಾಯ್ದಿರಿಸುವ ಷರತ್ತು ವಿಧಿಸಿ ಹಾಗೂ ಪ್ರಶ್ನಿತ ಜಮೀನಿನ ಪೂರ್ವಕ್ಕಿರುವ ರೈಲ್ವೆ ಲೈನ್ ಪ್ರಾಪರ್ಟಿಯ ಅಂಚಿನಿಂದ 30 ಮೀ ಬಫರ್ ಕಾಯ್ದಿರಿಸಿ ಉಳಿಕೆ ಜಾಗವನ್ನು ವಾಸದ ಉದ್ದೇಶಕ್ಕೆ ಪರಿಗಣಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಉಪ ಆಯುಕ್ತರು (ಭೂಸ್ವಾ) ಬೆಂ.ಅ.ಪ್ರಾ, ಬೆಂಗಳೂರು ರವರ ಪತ್ರ ಸಂ.ಬೆಂಅಪ್ರಾ/ಉಪ (ಭೂಸ್ವಾ) 669/ 2016-17 ದಿನಾಂಕ: 16-12-2016ರಂತೆ ಸದರಿ ಜಮೀನು ಪ್ರಾಧಿಕಾರವು ಹೊಸದಾಗಿ ರಚಿಸಲು ಉದ್ದೇಶಿಸಿರುವ ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆಗಾಗಿ ಗುರುತಿಸಿದ್ದು, ಸರ್ಕಾರದಿಂದ ಅನುಮೋದನೆಯಾಗಿರುವ ಪ್ರಸ್ತಾವನೆಯಲ್ಲಿ ಸೇರಿರುತ್ತದೆ. ಇತರೆ ಇಲಾಖೆಗಳಿಂದ ಭೂಸ್ವಾಧೀನದ ಬಗ್ಗೆ ಕಾನಿನನ್ವಯ ವರದಿ ಪಡೆದು ಮುಂದುವರೆಸಬಹುದೆ ಎಂಗು ತಿಳಿಸಿರುತ್ತಾರೆ.

ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂ. ಸಂ.ಎಸ್‌ಎಲ್‌ಎಒ/ಎಎಲ್‌ಎನ್ 722/16-17 ದಿನಾಂಕ:19-12-2016 ರಂತೆ ಸದರಿ ಜಮೀನು ತಮ್ಮ ಕಛೇರಿಯಲ್ಲಿ ಭೂಸ್ವಾಧೀನವಾಗಿರುವುದು ಕಂಡುಬರುತ್ತಿಲ್ಲವೆಂದು ತಿಳಿಸಿರುತ್ತಾರೆ.

ವಿಶೇಷ ಭೂ ಸ್ವಾಧೀನಾಧಿಕಾರಿ-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ರವರ ಪತ್ರ ಸಂ.ಬೆಂಗಳೂರು/ವಿಭೂಸ್ವಾಅ-2/2836/16-17 ದಿನಾಂಕ: 06-12-2016 ರಂತೆ ಸದರಿ ಜಮೀನು ತಮ್ಮ ಕಛೇರಿಯಿಂದ ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲವೆಂದು ತಿಳಿಸಿರುತ್ತಾರೆ.

ಮೇಲ್ಕಂಡ ವರದಿಯಲ್ಲಿನ ಅಂಶಗಳನ್ನಾಧರಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸ.ನಂ.18/1ಸಿ2 ರಲ್ಲಿ 1-37 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಸದರಿ ಜಮೀನಿನ ಪೈಕಿ 0-38.08 ಗುಂಟೆ ಜಮೀನು ವಾಸದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿ, ಅನುಮೋದನೆ ನೀಡಿದ್ದು, ಅರ್ಜಿದಾರರು ಈಗಾಗಲೇ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನಾ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿರುವುದರಿಂದ ಭೂ ಪರಿವರ್ತನಾ ಶುಲ್ಕದ ವ್ಯತ್ಯಾಸದ ಮೊತ್ತವನ್ನು ಹಿಂದಿರುಗಿಸುವುದಿಲ್ಲವೆಂಬ ಷರತ್ತು ವಿಧಿಸಿ ಸದರಿ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆಗೆ ಅನುಮೋದನೆ ನೀಡಲಾಗಿದೆ ಮತ್ತು ಉಲ್ಲೇಖ(1)ರ ಅಧಿಕೃತ ಜ್ಞಾಪನದಲ್ಲಿನ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂಬ ಷರತ್ತಿಗೊಳಪಡಿಸಿ **ಪರಿಷ್ಕೃತ ಆದೇಶ ಹೊರಡಿಸಲಾಗಿದೆ.**

**ಷೆಡ್ಯೂಲ್ ವಿವರ**

ಬೆಂಗಳೂರು ಜಿಲ್ಲೆ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸ.ನಂ.18/1ಸಿ2 ರಲ್ಲಿ 1-37 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಸದರಿ ಜಮೀನಿನ ಪೈಕಿ 0-38.08 ಗುಂಟೆ ಜಮೀನು ವಾಸದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿ ಪರಿಷ್ಕೃತ ಆದೇಶ ಹೊರಡಿಸಿರುವ ಜಮೀನಿನ ಚಕ್ಕುಬಂದಿ:

| ಸ.ನಂ. | ವಿಸ್ತೀರ್ಣ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
|---|---|---|---|---|---|
| 18/1ಸಿ2 | 0-38.08 | ರೈಲ್ವೆ ರಸ್ತೆ | ರಸ್ತೆ | ಸ.ನಂ.18/1ಬಿರ ಜಮೀನು | ಸ.ನಂ. 18/1ಸಿ2ರ ಉಳಿಕೆ ಜಮೀನು |

ಸಹಿ/-

(ವಿ. ಶಂಕರ್),
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.

1) ತಹಶೀಲ್ದಾರರು, ಬೆಂಗಳೂರು ಪೂರ್ವ ತಾಲ್ಲೂಕು, ರವರಿಗೆ ಗಣಿಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸಲು ಕಳುಹಿಸಿದೆ.
2) ಸಹಾಯಕ ನಿರ್ದೇಶಕರು (ಪೂರ್ವ) ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು.
4) ಉಪನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪವಿಭಾಗ, ಬೆಂಗಳೂರು. ಇವರಿಗೆ ಆರ್.ಟಿ.ಸಿ ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪ ನೋಂದಣಾಧಿಕಾರಿಗಳು, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6) ಅರ್ಜಿದಾರರಾದ ಶ್ರೀಮತಿ ಅಪರ್ಣ ಚನ್ನಕೇಶವಲು ಬಿನ್ ವಿ.ಕೆ. ಚನ್ನಕೇಶವಲು, ನಂ.81/ಡಿ 17ನೇ ಇ ಮೈನ್ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ರವರಿಗೆ ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿದೆ.
7) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು